**2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.**

**ಓ ಎಸ್ ನಂ.559-2017 ಡಿ . ಡಬ್ಲ್ಯು: 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ರಂಗಶೆಟ್ಟಿ<br>ಕಾರೆಮೋಳೆ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 06-03-2025.** |

**<u>ಮುಂದುವರೆದ ಪಾಟೀ ಸವಾಲು: ವಾದಿಗಳ ಪರ ಶ್ರೀ.ಪಿ.ಎಂ ವಕೀಲರಿಂದ:</u>**

5. ದಾವಾ ಷೆಡ್ಯೂಲ್ ಸ್ವತ್ತು ಎಂದರೆ ಚಿಕ್ಕಹೊಮ್ಮ ಗ್ರಾಮದ ಸರ್ವೇ ನಂ.42 ವಿಸ್ತೀರ್ಣ 3 ಎಕರೆ 20 ಗುಂಟೆ ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತಿನ ಮೇಲೆ ನಾನು ಸಾಲವನ್ನು ಪಡೆದು ತೀರುವಳಿ ಮಾಡಿರುತ್ತೇನೆ. ನಾನು 1985, 1986, 1988 ನೇ ಸಾಲಿನಲ್ಲಿ ಪಿ.ಎಲ್.ಬಿ ಬ್ಯಾಂಕಿನಿಂದ ದಾವಾ ಷೆಡ್ಯೂಲ್ ಸ್ವತ್ತಿನ ಮೇಲೆ ಸಾಲ ಪಡೆದಿದ್ದೆನು ಎಂದರೆ ಸರಿ. ನಾನು ದಿ.09-01-1986 ರಂದು ಪಿ.ಎಲ್.ಡಿ ಬ್ಯಾಂಕಿನಿಂದ ರೂ.8,000/- ಗಳ ಸಾಲವನ್ನು ಪಡೆದುಕೊಂಡಿದ್ದೆನು ಎಂದರೆ ಸರಿ. ಸಾಕ್ಷಿಗೆ ನಂಜನಗೂಡು ಪಿ.ಎಲ್.ಡಿ ಬ್ಯಾಂಕಿನವರು ನೀಡಿರುವ ಆಧಾರ ಪತ್ರದ ದೃಢೀಕೃತ ಪ್ರತಿಯನ್ನು ತೋರಿಸಿ ದಿ.10-12-1985 ರಂದು ನಾನು ದಾವಾ ಷೆಡ್ಯೂಲ್ ಸ್ವತ್ತಿನ ಬಾಬ್ತು ನಾನು ಪಿ.ಎಲ್.ಡಿ ನಿಂದ ಸಾಲ ಪಡೆದುಕೊಂಡಿರುತ್ತೇನೆ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿದ್ದು ಸದರಿ ದಾಖಲೆಯನ್ನು ನಿಪಿ-8

ಎಂದು ಗುರುತಿಸಲಾಯಿತು. ಸದರಿ ಆಧಾರ ಪತ್ರದಲ್ಲಿ ನನ್ನ ಮತ್ತು ನನ್ನ ಸಹೋದರರ ಹೆಸರುಗಳು ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ದಿ.03.05.1985 ರ ಆಧಾರ ಪತ್ರದ ದೃಢೀಕೃತ ಪ್ರತಿಯನ್ನು ತೋರಿಸಿ ರಂದು ಪುನಃ ನಾನು ಪಿ.ಎಲ್.ಡಿ ಬ್ಯಾಂಕಿನಿಂದ ರೂ.13,000/- ಗಳನ್ನು ಸಾಲವಾಗಿ ಪಡೆದಿರುತ್ತೇನೆ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ನಾನು ನನ್ನ ಜಮೀನಿಗೆ ಸಂಬಂಧಿಸಿದಂತೆ ಸಾಲ ಪಡೆದು ಅದನ್ನು ತೀರುವಳಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ದಿ.03-05-1985 ರಂದು ಸಾಲ ಪಡೆದ ಸಮಯ ನಾನು ಮತ್ತು ಸಹೋದರರರು ಸೇರಿ ಆಧಾರ ಪತ್ರವನ್ನು ಬ್ಯಾಂಕಿಗೆ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಗೆ ದಿ.19-01-1988 ರ ಆಧಾರ ಪತ್ರದ ದೃಢೀಕೃತ ಪ್ರತಿಯನ್ನು ತೋರಿಸಿ ನಾನು ಪಿ.ಎಲ್.ಡಿ ಬ್ಯಾಂಕಿನಿಂದ ರೂ.5,000/- ಗಳ ಸಾಲ ಪಡೆದುಕೊಂಡಿರುತ್ತೇನೆ ಎಂಬ ಪ್ರಶ್ನಗೆ ಸಾಕ್ಷಿ ಹೌದು ಒಪ್ಪಿಕೊಂಡಿದ್ದು ಸದರಿ ದಾಖಲೆಯನ್ನು ನಿಪಿ-10 ಎಂದು ಗುರುತಿಸಲಾಯಿತು. ಸದರಿ ಸಾಲವನ್ನು ನಾನು ಮತ್ತು ನನ್ನ ಸಹೋದರರ ಸೇರಿ ಪಡೆದಿರುತ್ತೇವೆ ಎಂಬ ಪ್ರಶ್ನೆಗೆ ಸಾಕ್ಷಿ ನಾನು ನನ್ನ ಸ್ವತ್ತಿಗೆ ಸಂಬಂಧಿಸಿದಂತೆ ಸಾಲ ಪಡೆದು ಅದನ್ನು ತೀರುವಳಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತು ನಮ್ಮ ಪಿತ್ರಾರ್ಜಿತ ಸ್ವತ್ತಾಗಿರುವುದರಿಂದ ನಾನು ಮತ್ತು ನನ್ನ ಸಹೋದರರ ಸೇರಿ ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ

ಸಾಲ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾವಾ ಷೆಡ್ಯೂಲ್ ಸ್ವತ್ತು ನಾನು ಮತ್ತು ಪತ್ನಿಯವರು ಸಂಪಾದನೆ ಮಾಡಿದ ಹಣದಿಂದ ಖರೀದಿ ಮಾಡಿದ ಸ್ವತ್ತಾಗಿದ್ದು, ಬ್ಯಾಂಕಿನವರು ನನ್ನ ಸಹೋದರರನ್ನು ಕರೆದುಕೊಂಡು ಬರುವಂತೆ ತಿಳಿಸಿದ್ದರಿಂದ ಅವರನ್ನು ಕರೆದುಕೊಂಡು ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಸಾಲ ಪಡೆಯುವ ಸಮಯ ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಬ್ಯಾಂಕಿಗೆ ನೀಡಿದ್ದೆನು ಎಂದರೆ ಸರಿ. ನಾನು ದಾಖಲೆಯನ್ನು ಬ್ಯಾಂಕಿಗೆ ನೀಡಿದ ಸಮಯ ದಾವಾ ಷೆಡ್ಯೂಲ್ ಸ್ವತ್ತಿನ ಖಾತೆಯೂ ನನ್ನ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸಾಲದ ಅರ್ಜಿ ಮತ್ತು ಆಧಾರ ಪತ್ರದಲ್ಲಿ ಹೇಳಿರುವ ವಿಚಾರಗಳು ಸತ್ಯವಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಸ್ವಯಾರ್ಜಿತ ಸ್ವತ್ತಿನ ಬಾಬ್ತು ಸಾಲ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ಬ್ಯಾಂಕಿನವರು ನಮ್ಮ ಒಟ್ಟು ಕುಟುಂಬದ ಸದಸ್ಯರನ್ನು ಕರೆತಂದು ಸಹಿ ಮಾಡಿಸುವಂತೆ ತಿಳಿಸಿರುವುದಿಲ್ಲ.

6. ದಾವಾ ಷೆಡ್ಯೂಲ್ ಸ್ವತ್ತು ನಮ್ಮ ಕುಟುಂಬಕ್ಕೆ 3 ಕ್ರಯ ಪತ್ರಗಳ ಮುಖೇನ ಬಂದಿರುತ್ತದೆ ಎಂದರೆ ಸರಿ. ನನಗೆ ಒಟ್ಟು 4 ಜನ ಹೆಣ್ಣು ಮಕ್ಕಳು ಇರುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತು ನಮ್ಮ ಒಟ್ಟು ಕುಟುಂಬದ ಸ್ವತ್ತಾಗಿದ್ದು, ಸದರಿ ಸ್ವತ್ತನ್ನು ನಾನು ಮತ್ತು ನನ್ನ ಸಹೋದರರು ದಿ.14-02-2009 ರಂದು ಪಂಚಾಯ್ತಿದಾರರ

ಸಮಕ್ಷಮದಲ್ಲಿ ಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರಕ್ಕೆ ನಮ್ಮ ಗ್ರಾಮದ ಮಾದಶೆಟ್ಟಿರವರ ಮಗ ಮಹದೇವಶೆಟ್ಟಿ ಮತ್ತು ಮಾದಶೆಟ್ಟಿ ರವರ ಮಗ ಕಾಳಶೆಟ್ಟಿ ರವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸಹಿ ಮಾಡುತ್ತೇನೆ. ಸಾಕ್ಷಿಗೆ ನಿಪಿ–7 ರಲ್ಲಿನ ಸಹಿಯನ್ನು ತೋರಿಸಿ, ಸಹಿ ನಿಮ್ಮದೇ ಎಂಬ ಪ್ರಶ್ನೆಗೆ ಸಾಕ್ಷಿ ನನ್ನದಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ವಕಾಲತ್ ಅನ್ನು ತೋರಿಸಿ ಅದರಲ್ಲಿನ ಸಹಿ ಯಾರದ್ದು ಎಂದು ಕೇಳಲಾಗಿ ಸಾಕ್ಷಿ ನನ್ನದಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಡಿ–5 ಅನ್ನು ತೋರಿಸಿ ಅದರಲ್ಲಿನ ಸಹಿ ಯಾರದ್ದು ಎಂದು ಕೇಳಲಾಗಿ ಸಾಕ್ಷಿ ನನ್ನದಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ನಿಡಿ–5 ರ ಕೊನೆಯ ಪುಟದಲ್ಲಿ ಇರುವ ಸಹಿ ತನ್ನದೇ ಎಂದು ಒಪ್ಪಿಕೊಂಡಿರುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತು ನನ್ನ ಮತ್ತು ನನ್ನ ಪತ್ನಿಯವರ ಕಾಲ ನಂತರ ನನ್ನ ಮಕ್ಕಳಿಗೆ ಬರುತ್ತದೆ. ನನ್ನ ಮಗಳಾದ ಗೌರಮ್ಮ ನವರು ಬಾವಿ ಸಾಲ ಪಡೆಯಲು ಅನುಕೂಲವಾಗಲಿ ಎಂಬ ಉದ್ದೇಶದಿಂದ ನನ್ನ ಇತರೇ ಮಕ್ಕಳ ಒಪ್ಪಿಸಿ ನನ್ನ ಮಗಳಾದ ಗೌರಮ್ಮಳಿಗೆ ದಾನ ಪತ್ರ ಬರೆದುಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ದಾನ ಪತ್ರವಾಗುವ ಸಮಯ ನನ್ನ ಉಳಿದ ಮಕ್ಕಳು ಸಹ ಇದ್ದರು. ನನ್ನ ಇತರೇ ಮಕ್ಕಳನ್ನು ನಾನು ಒಪ್ಪಿಸಿ ಗೌರಮ್ಮಳಿಗೆ ದಾನ ಪತ್ರ ಬರೆದ ಕಾರಣ ಅವರು ಸಹಿ ಮಾಡಿರುವುದಿಲ್ಲ. ದಾವಾ ಷೆಡ್ಯೂಲ್ ಸ್ವತ್ತು ಒಟ್ಟು ಕುಟುಂಬದ ಸ್ವತ್ತಾಗಿದ್ದು, ನನ್ನ ಸಹೋದರರಿಗೆ ಮೋಸ ಮಾಡುವ ಉದ್ದೇಶದಿಂದ ದಾನ ಪತ್ರವನ್ನು

ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆಯವರಿಗೆ ನಾನೇ ಹಿರಿಯ ಮಗನಾಗಿರುತ್ತೇನೆ. ನಾನು ಕುಟುಂಬದ ಹಿರಿಯ ಮಗನಾದ ಕಾರಣ ನನ್ನ ಸಹೋದರರು ಮತ್ತು ನಾನು ಸಂಪಾದಿಸಿದ ಹಣದಿಂದ ದಾವಾ ಷೆಡ್ಯೂಲ್ ಸ್ವತ್ತನ್ನು ನನ್ನ ಹೆಸರಿನಲ್ಲಿ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಮಂಡ್ಯದ ಕಿರಂಗದೂರು ಗ್ರಾಮದ ಸಿದ್ದೇಗೌಡ ರವರ ಮರಣ ಹೊಂದಿದ್ದು, ಅವರು ಮಕ್ಕಳು ಜೀವಂತ ಇರುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ನನ್ನ ಮಕ್ಕಳಿಗೂ ಸಹ ಭಾಗ ಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**